ಇಬ್ಬರೂ ಮೂವರೂ ಕೂಡಿಯೋ ಒಂಟಿಯಾಗಿಯೋ ಮಾಡಿದ್ದಾರೆ. ಎಲ್ಲರೂ ಸೇರಿ ಮಾಡಿದ್ದು ಇದೇ ಮೊದಲ ಬಾರಿಯಂತೆ. ಅವರಲ್ಲಿ ಒಬ್ಬ ಹುಡುಗ ತಮ್ಮ ಮನೆ ಪಕ್ಕದ ಹುಡುಗಿಯೊಂದಿಗೆ ಓಡಿಹೋಗಿ, ಸ್ವಲ್ಪ ದಿನಗಳ ನಂತರ ಒಬ್ಬನೇ ತಿರುಗಿ ಬಂದಿದ್ದಾನಂತೆ. ಆಕೆ ಏನಾದಳೋ ಯಾರಿಗೂ ಗೊತ್ತಿಲ್ಲ. ಆಕೆಯ ಮನೆಯವರು ಕೇಸ್ ಮಾಡಲೂ ಸಹ ಹೆದರಿಬಿಟ್ಟರು. ಮತ್ತೊಬ್ಬ ಒಂದು ಹುಡುಗಿಯನ್ನು ರೆಡ್ ಲೈಟ್ ಏರಿಯಾಕ್ಕೆ ಮಾರಿಬಿಟ್ಟನಂತೆ. ಆಕೆಯ ಮನೆಯವರು ಗಲಾಟೆ ಮಾಡಲು ಮುಂದಾದರೆ ಸಂಬಂಧಿಕರಾರೋ ಆ ವಿಷಯ ಪೊಲೀಸ್ ಸ್ಟೇಷನ್ ಮೆಟ್ಟಿಲು ಹತ್ತಿದರೆ ಏನಾಗುತ್ತದೆಯೋ ಎಂದು ಆ ಜಗಳವನ್ನು ಸೆಟಿಲ್ ಮಾಡಿದರಂತೆ" ಎಂದರು ಜಿವಿ.

ಈ ಹುಡುಗರು ವಿಷಸರ್ಪಗಳಂತಿದ್ದಾರಲ್ಲ. ಹುಡುಗಿಯರ ಬದುಕನ್ನು ವಿಷಮಯ ಮಾಡಿದಾಗಲೂ ಯಾವುದೇ ದೂರು ಇಲ್ಲದಿರುವುದರಿಂದ ಅವರಿಗೆ ಇದುವರೆಗೂ ಯಾವ ಶಿಕ್ಷೆಯೂ ಆಗಿಲ್ಲ. ಅವರಿಗೆ ಎಳ್ಳಷ್ಟು ಪರಿಚಯವಿಲ್ಲದವರ ಬದುಕಿನ ಮೇಲೆ ಹರಿಹಾಯುತ್ತಿದ್ದಾಗ ಅದರ ಪರಿಣಾಮ ಏನಾಗಬಹುದೆಂದು ಆ ಕ್ಷಣದಲ್ಲಿ ಅವರು ಊಹಿಸಿರಲಾರರು. ಆಲೋಚನೆಯನ್ನೂ ಮಾಡಿರಲಾರರು. ಜೀವನ ಎಲ್ಲ ಕಾಲಕ್ಕೂ ಸುರಕ್ಷಿತವಾಗಿಲಾರದಲ್ಲ ಎಂದುಕೊಳ್ಳುತ್ತ "ಅವರಿದ್ದ ಜಾಗಗಳನ್ನು ನೋಡಬೇಕಿದೆ" ಎಂದೆ.

ಸಾಕಷ್ಟು ವಾದವಿವಾದಗಳಾದ ಮೇಲೆ ಚೈತನ್ಯನನ್ನು ನಮ್ಮೊಂದಿಗೆ ಬರದಂತೆ ತಡೆದು ಯಾರಿಗೂ ಅನುಮಾನ ಬರದಂತೆ ಸಾಧ್ಯವಾದಷ್ಟು ಎಚ್ಚರಿಕೆಯಿಂದ ಮುಸುಗುವೀರಳಂತೆ ಅವರ ಮನೆಗಳಿಗೆ ಜಿವಿಯ ಜೊತೆಗೆ ಹೋಗಿ ನೋಡಿ ಬಂದೆ.

"ಆ ಗಜಿಬಿಜಿ ಏನು... ಉಸಿರುಗಟ್ಟುವ ಇಕ್ಕಟ್ಟೇನು... ಎಲ್ಲ ರೀತಿಯಲ್ಲಿಯೂ ಎಲ್ಲರ ಜೀವನ ಮಟ್ಟವನ್ನು ಸುಧಾರಿಸಲು ಯಾಕೆ ಪ್ರಯತ್ನಿಸುವುದಿಲ್ಲ ಈ ಸರ್ಕಾರಗಳು. ದಿನದಿನಕ್ಕೂ ಹೆಚ್ಚುತ್ತಿರುವ ಈ ತರದ ಕ್ರೂರತ್ವವನ್ನು ತಡೆಗಟ್ಟಬಹುದಾದ ವಿಷಯಗಳೆಡೆ ಯಾಕೆ ಗಮನ ಹರಿಸುತ್ತಿಲ್ಲ. ಇದಕ್ಕೆ ಸಂಬಂಧಿಸಿ ಕೆಲವರನ್ನು ಕೆಲವು ಪ್ರಶ್ನೆಗಳು ಕೇಳಬಹುದಲ್ಲವೆ" ಎಂದೆ ಜಿವಿಯವರೊಂದಿಗೆ.

"ಸಮಸ್ಯೆ ಅದೇ ಅಲ್ಲವೆ. ಸರ್ಕಾರಗಳು ಸಮಸ್ಯೆಗಳನ್ನು ಗುರುತಿಸುತ್ತವೆಯೇ ಹೊರತು ಪರಿಹಾರಗಳನ್ನು ಸೂಚಿಸಲಾರವು. ಅಷ್ಟೇ ಅಲ್ಲ ಒಂದು ಪ್ರದೇಶದ ಯುವಕರು ಅದೇ ಪ್ರದೇಶದಲ್ಲಿರುವ ಮಹಿಳೆಯರನ್ನು ಎಷ್ಟೆಲ್ಲಾ ರೀತಿ ಹಿಂಸಿಸಿದರೂ ಅದು ಸುದ್ದಿಯಾಗುವುದಿಲ್ಲ. ಅದೇ ರೀತಿ ಅಪಾರ್ಟ್‌ಮೆಂಟ್‌ಗಳಲ್ಲಿ ಗೇಟೆಡ್ ಕಮ್ಯುನಿಟಿಗಳಲ್ಲಿ ಇವೆಲ್ಲ ಇಲ್ಲವೆ. ಒಂಟಿ ಮನೆಗಳಲ್ಲಿದ್ದ ಗಂಡಸರು ಅವರ ಮನೆಗಳಲ್ಲಿದ್ದ ಹೆಂಗಸರ ಮೇಲಾಗಲಿ ತಮ್ಮ ಮನೆಗಳಲ್ಲಿ ಕೆಲಸ ಮಾಡುವ ಹೆಂಗಸರ ಮೇಲಾಗಲಿ ಎಷ್ಟೇ ಅತ್ಯಾಚಾರಗಳನ್ನು ಮಾಡಿದರೂ ಅವು ಬಯಲಿಗೆ ಬರುವುದಿಲ್ಲ. ಮಹಿಳೆಯರ ಮೇಲಿನ ಹಿಂಸೆ ಎಲ್ಲ ಕಡೆಗೂ ಇದ್ದಾಗ್ಯೂ ಕೆಲವು ಸಂದರ್ಭಗಳನ್ನು ಹೊರತು ಪಡಿಸಿದರೆ ಬಡ ಯುವಕರು ಉನ್ನತ ವರ್ಗದ ಯುವತಿಯರ ಮೇಲೆ ದಾಳಿ ಮಾಡಿದರೆ ಮಾತ್ರ ಅವು ಅನೇಕ ಬಾರಿ ದೊಡ್ಡ ಅಪರಾಧಗಳಾಗಿ ಬಯಲಿಗೆ ಬರುತ್ತವೆ. ಎಲ್ಲರನ್ನೂ ಸ್ಪಂದಿಸುವಂತೆ ಮಾಡುತ್ತವೆ. ಅವು ಮಾತ್ರವೇ ದೊಡ್ಡ ಸುದ್ದಿಯಾಗುತ್ತವೆ. ಇದು ಹೀಗೇಕೆ ಎಂದು ನಾವು ಯೋಚಿಸಬೇಕಿದೆ" ಎಂದರು ಜಿವಿ.

ಯಾರ ಸಮಸ್ಯೆಯೋ ಯಾರ ನಿರ್ಲಕ್ಷ್ಯವೋ! ಆದರೆ, ಅನ್ಯಾಯವಾಗಿ ನನ್ನ ಜೀವನವನ್ನು ನರಕ ಮಾಡಿದರು.

ಒಂದು ದಿನ "ಕೇಸ್ ಎಲ್ಲವನ್ನೂ ಚೊಕ್ಕವಾಗಿ ಫೈಲ್ ಮಾಡಿದ್ದೇವೆ. ನಿಮಗೆ ಖಂಡಿತ ನ್ಯಾಯ